# ಕೇಶೀರಾಜರ ಹೊಸ ವಿನ್ಯಾಸ



ಈಗ ತಲೆಗೂದಲಿನ ವಿನ್ಯಾಸ ಚಕಚಕನೆ ಬದಲಾಗುತ್ತಿದೆ. 'ಕಾಂಬ್ ಓವರ್ ಹೇರ್‌ಸ್ಟೈಲ್' ಈ ದಿನಮಾನದಲ್ಲಿ ಅತಿ ಹೆಚ್ಚು ಚಾಲ್ತಿಯಲ್ಲಿರುವ ಶೈಲಿಗಳಲ್ಲಿ ಒಂದು.

★ ವಿಶಾಖ ಎನ್.

ತಿನ್ನುವ ಜಾಮ್ ಅನ್ನೇ ಮೆತ್ತಿ ಕೂದಲನ್ನು ಸ್ಪೈಕ್ಸ್ ಮಾಡಿಕೊಂಡು ಕಾಲೇಜು ಕಾರಿಡಾರಿನಲ್ಲಿ ನಡೆಯತೊಡಗಿದ ಹುಡುಗನ ತಲೆ ಮೇಲೆ ಕೀಟಗಳ ಪ್ರಭಾವಳಿ – ಇದು ಕನ್ನಡದ್ದೇ ಸಿನಿಮಾವೊಂದರ ಹಾಸ್ಯ ದೃಶ್ಯದ ಸರಕು.

ಮೊನ್ನೆ ಮೊನ್ನೆ ಟಿ.ವಿ. ರಿಯಾಲಿಟಿ ಷೋನಲ್ಲಿ ಬೈತಲೆಯನ್ನೇ ತೆಗೆಯದ ಬಾಲಕನೊಬ್ಬ ಕೂದಲ ನಡುವೆ ನೆಚ್ಚಿನ ನಾಯಕ ಪುನೀತ್ ರಾಜ್‌ಕುಮಾರ್ ಹೆಸರನ್ನು ಬರೆಸಿಕೊಂಡು ಶಹಬ್ಬಾಸ್‌ಗಿರಿ ಪಡೆದಿದ್ದ. ಅವನಿಗೆ ಶಿಕ್ಷಕ–ಶಿಕ್ಷಕಿಯರು ಇದಕ್ಕೆ ಹೇಗೆ ಅನುಮತಿ ಕೊಟ್ಟರೋ ಎನ್ನುವುದು ಬೇರೆ ಪ್ರಶ್ನೆ.

ತಲೆಗೂದಲು ಈಗ ಮೊದಲಿಗಿಂತ ಹೆಚ್ಚೇ ಪ್ರಯೋಗಶಾಲೆಯಾಗಿದೆ. ಮುಂಭಾಗದಲ್ಲಿ ಗುಪ್ಪೆ ಕೂದಲು ಬಿಟ್ಟು, ಆಗೀಗ ಅದನ್ನು ಹಿಂದಕ್ಕೆ ತಳ್ಳುತ್ತಿದ್ದ 1970ರ ದಶಕದ ಸಿನಿಮಾ ನಾಯಕರ ಕಾಲವೊಂದಿತ್ತು. ನೀಟಾಗಿ ಕ್ರಾಪು ತೆಗೆದ 'ಜಂಟಲ್‌ಮನ್' ನಾಯಕರನ್ನೂ ಸಿಕ್ಕಾಪಟ್ಟೆ ನೋಡಿ ಆಗಿದೆ. ಪಾತ್ರದ ರೂಹಿಗೆ ತಕ್ಕಂತ ವಿಗ್‌ಗಳೂ ಅವರ ಶಿರಗಳನ್ನಲಂಕರಿಸಿದ ಉದಾಹರಣೆಗಳೂ ಇವೆ. ತಲೆಗೂದಲನ್ನು ಯಾಕಾದರೂ ಬಾಚಬೇಕು ಎನ್ನುವಂತೆ ಕೂದಲನ್ನೇ ವಿಪರೀತ ಕುಣಿಸಿ, ನರ್ತಿಸುತ್ತಿದ್ದ ಶಮ್ಮಿಕಪೂರ್ ವರಸೆಯನ್ನು ಮೆಲುಕು ಹಾಕುವ ರಸಿಕರೂ ಇದ್ದಾರೆ.

ಈಗ ತಲೆಗೂದಲಿನ ವಿನ್ಯಾಸ ಚಕಚಕನೆ ಬದಲಾಗುತ್ತಿದೆ. 'ಕಾಂಬ್ ಓವರ್ ಹೇರ್‌ಸ್ಟೈಲ್' ಈ ದಿನಮಾನದ ಅತಿ ಹೆಚ್ಚು ಚಾಲ್ತಿಯಲ್ಲಿರುವ ಶೈಲಿಗಳಲ್ಲಿ ಒಂದು. '...ದಿಲ್ ಹೈ ಮುಷ್ಕಿಲ್' ಹಿಂದಿ ಸಿನಿಮಾದಲ್ಲಿ ರಣಬೀರ್ ಕಪೂರ್ ಇದೇ ಶೈಲಿಯ ಕೇಶ ವಿನ್ಯಾಸ ಮಾಡಿಸಿಕೊಂಡಿದ್ದರು. ಅರ್ಜುನ್ ಕಪೂರ್, ಶಾರುಖ್ ಖಾನ್ ಕೂಡ ಆಗೀಗ ಈ ಕೇಶ ವಿನ್ಯಾಸಕ್ಕೆ ತಲೆಯೊಡ್ಡಿಕೊಂಡವರೇ. ಮಧ್ಯಮ ಉದ್ದದ ಕೂದಲಿರುವವರು ಕ್ರಾಪು ಕೂಡ ತೆಗೆಯಬಹುದಾದ ವಿನ್ಯಾಸ ಇದು. ಏಕಕಾಲದಲ್ಲಿ ಎರಡು ಸಿನಿಮಾಗಳನ್ನು ಒಪ್ಪಿಕೊಂಡವರ ಪಾಲಿಗೆ ಈ ಕೇಶ ವಿನ್ಯಾಸ ಅನುಕೂಲಕರ. ಹೀಗಾಗಿಯೇ ವರ್ಷಕ್ಕೆ ಮೂರ್ನಾಲ್ಕು ಸಿನಿಮಾ ಚಿತ್ರೀಕರಣದಲ್ಲಿ ತೊಡಗಲು ಒಪ್ಪುವವರು 'ಕಾಂಬ್ ಓವರ್ ಹೇರ್‌ಸ್ಟೈಲ್' ನೆಚ್ಚಿಕೊಳ್ಳುತ್ತಾರೆ.

'ಗಡ್ಡ ಎಳೆದವನ ಬಾಯಿಗೆ ಮಿಠಾಯಿ' ಎಂಬ ಹಳೆಯ ನುಡಿಗಟ್ಟು ಕೇಳಿದ್ದೇವೆ. ಈಗ ತಮ್ಮ ಗಡ್ಡವನ್ನು ತಾವೇ ಎಳೆದುಕೊಳ್ಳುತ್ತ, ಅದಕ್ಕೂ ತಲೆಗೂದಲಿಗೂ ನಡುವೆ ಕಲ್ಪಿಸಿಟ್ಟ ಸಂಬಂಧ ಹದ ತಪ್ಪುತ್ತಿದೆಯೋ ಇಲ್ಲವೋ ಎಂದು ಅವಲೋಕಿಸುವ ಮನಸ್ಸುಗಳು ದಂಡಿಯಾಗಿವೆ. ಕನ್ನಡಿಗೂ ಅವರ ಕೇಶ–ಗಡ್ಡ ಪ್ರೀತಿ ಕಂಡು ಸುಸ್ತಾಗಿರಬೇಕು. ಈಗ ದಾಡಿಗೂ, ಕೇಶ ವಿನ್ಯಾಸಕ್ಕೂ ಭಯಂಕರ ಸಂಬಂಧ ಉಂಟು. ಸೈಡ್‌ಲಾಕ್‌ನಿಂದ ತೊರೆಯಂತೆ ಹರಿದು, ಗಲ್ಲಕ್ಕೆ ಬರುವ ಹೊತ್ತಿಗೆ ಉಕ್ಕುವಂಥ ಗಡ್ಡ ಫ್ರೆಂಚ್–ಭಾರತದ ನಡುವಿನ ಅಂತರರಾಷ್ಟ್ರೀಯ ಸಂಬಂಧದ ರೂಪಕವೇನೋ? ಕ್ರಿಕೆಟಿಗ ವಿರಾಟ್ ಕೊಹ್ಲಿ ಈ ವಿನ್ಯಾಸದ ಅಘೋಷಿತ ಪ್ರಚಾರ ರಾಯಭಾರಿ.

ಒತ್ತೊತ್ತಾದ ಕೂದಲು, ಭರಪೂರ ಬೆಳೆದ ಗಡ್ಡ ಅವರಿಗೆ ವರದಾನ. ನೆತ್ತಿ ಮೇಲೆ ಮಧ್ಯಮ ಉದ್ದದಲ್ಲಿ ಕೂದಲು ಇರುವಂತೆ ನೋಡಿಕೊಂಡು, ಸುತ್ತ ಶಾರ್ಟ್ ಆಗಿಸಿ, ಸೈಡ್‌ಲಾಕ್‌ನ ಜೊತೆ ಹದವಾಗಿ ಮಿಳಿತವಾಗುವ ಕೇಶವಿನ್ಯಾಸ ಅವರ ಬ್ಯಾಟಿಂಗ್‌ನಷ್ಟೇ ಚರ್ಚೆಗೆ ಒಳಗಾಗುತ್ತದೆ. ಸಲೂನ್ ಶಾಪ್ ಗಾಜುಗಳ ಮೇಲೆ ಕಾಣುವ ಚೆಲುವಾಂತ ಚೆನ್ನಿಗರ ಚಿತ್ರಪಟಗಳ ಸಾಲಿನಲ್ಲಿ ಅವರದ್ದಂತೂ ಕಾಯಂ. 'ಟೈಟಾನಿಕ್' ಸಿನಿಮಾ ನಾಯಕ ಲಿಯೊನಾರ್ಡೊ ಡಿಕ್ಯಾಪ್ರಿಯೊ ಅವರ ಕೇಶವಿನ್ಯಾಸಕ್ಕಿದ್ದ ಹದವನ್ನೇ ಕಣಕಿ ಮಾಡಿದಂಥ ವಿನ್ಯಾಸ ಕೊಹ್ಲಿ ಅವರದ್ದು. ಗಡ್ಡ ಮಾತ್ರ ದೇಸಿ ಕಸಿ. ಬಹುತೇಕ ಕ್ರಿಕೆಟಿಗರು ಕೊಹ್ಲಿ ಶೈಲಿಯನ್ನು ಅನುಕರಿಸತೊಡಗಿದ್ದು, ಅದರಲ್ಲೇ ಕೆಲವರು ಕೊಂಚ ಮಾರ್ಪಾಟು ಮಾಡಿಕೊಳ್ಳುತ್ತಿದ್ದಾರೆ.

'ರಾಗ್ ಬೋನ್‌ಮನ್' ಎಂಬ ಅಡ್ಡಹೆಸರಿನಿಂದಲೇ ಗುರುತಾಗಿರುವ ಇಂಗ್ಲೆಂಡ್‌ನ ಮಾಂತ್ರಿಕ ಪಾಪ್ ಗಾಯಕ ರೋರಿ ಚಾರ್ಲ್ಸ್ ಗ್ರಹಾಂ ಕೇಶ ವಿನ್ಯಾಸ ಕಳೆದ ಒಂದೂವರೆ ವರ್ಷದಲ್ಲಿ ಹದಿನೆಂಟು ದೇಶಗಳಲ್ಲಿ ಜನಪ್ರಿಯವಾಗಿತ್ತು. ನೆತ್ತಿಮೇಲೆ ಬಿಟ್ಟು, ಮಿಕ್ಕಂತೆ ಎಲ್ಲ ಕಡೆ ಅತಿ ಶಾರ್ಟ್; ಗಲ್ಲದ ಮೇಲೆ ಹೊತದ ಗಡ್ಡ—ಇದು 'ಹ್ಯೂಮನ್' ಆಲ್ಬಂನಲ್ಲಿ ಬೋನ್‌ಮನ್ ಗೆಟಪ್. ಅದನ್ನೇ

